**ಓ.ಎಸ್.:26/2018**

**ಪಿ. ಡಬ್ಲ್ಯೂ:1**

ದಿನಾಂಕಃ 08-11-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ_ಪಾಟೀ_ಸವಾಲುಃ** 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಎಮ್.ಬಿ.ಹೆಚ್ ರವರಿಂದ

ನನ್ನ ತಾಯಿ ಅಂದರೆ 1 ನೇ ವಾದಿಯ ಮದುವೆ 1 ನೇ ಪ್ರತಿವಾದಿ ಜೊತೆ ಗೊಡಚಿನಮಲ್ಕಿ ಯಲ್ಲಿ ಆಗಿರುತ್ತದೆ. ನನ್ನ ತಾಯಿ ಮತ್ತು 1 ನೇ ಪ್ರತಿವಾದಿಯ ಮದುವೆ ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ಮದುವೆಯಾದ ಬಗ್ಗೆ ಯಾದಿ , ಲಗ್ನ ಪತ್ರಿಕೆ ಮತ್ತು ಫೋಟೋ ಇರುವುದಿಲ್ಲ ಅಂದರೆ ಸಾಕ್ಷಿ ಫೋಟೋ ತೆಗೆದಿರುವುದಿಲ್ಲ ಯಾದಿ ಮತ್ತು ಲಗ್ನ ಪತ್ರಿಕೆ ಮಾಡಿಸಿರುತ್ತಾರೋ ಇಲ್ಲವೋ ಗೊತ್ತಿಲ್ಲ. ನನ್ನ ತಾಯಿ ಮತ್ತು 1 ನೇ ಪ್ರತಿವಾದಿ ಮದುವೆ ಆಗಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ತಾಯಿ ಖಾಯಂ ಆಗಿ ಮಲ್ಲಾಪುರ ಪಿ ಜಿ ಯಲ್ಲಿ ಇರುತ್ತಾಳೆ ಅಂದರೆ ಸರಿಯಲ್ಲ ಸಾಕ್ಷಿ ಸ್ವತಃ ಹೇಳುವುದೆಂದರೆ ಗೊಡಚಿನಮಲ್ಕಿಯಲ್ಲಿ ಇರುತ್ತಾಳೆ. ಭೀಮಶೆಪ್ಪ ತಂದೆ ಭೀಮಪ್ಪನಿಗೆ 1 ನೇ ಪ್ರತಿವಾದಿಗೆ ಸರ್ವೆ ನಂ.224 ರಲ್ಲಿ 1 ಎಕರೆ 2.8 ಗುಂಟೆ ಜಮೀನನ್ನು ದಿನಾಂಕ 9-4-1969 ರಂದು ಮಾರಾಟ ಮಾಡಿರುತ್ತಾನೆ ಅಂದರೆ ಸರಿ. 1 ನೇ ಪ್ರತಿವಾದಿ ಸವೆ ನಂ. 224 ರಲ್ಲಿ 1 ಎಕರೆ 2.8 ಗುಂಟೆ ಜಮೀನಿನ ಸ್ವಾಧೀನ ಹೊಂದಿರುತ್ತಾನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯ ಗಂಡ ಸರ್ವೆ ನಂ. 242 ನ್ನು 3 ನೇ ಪ್ರತಿವಾದಿಗೆ ದಿನಾಂಕ 7-1-1980 ರಂದು ಮಾರಾಟ ಮಾಡಿರುತ್ತಾನೆ ಅಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 242 ಈಗ 242/1 ಮತ್ತು 242/2 ಎಂದು ಆಗಿರುತ್ತವೆ ಅಂದರೆ ಸರಿ. ಸರ್ವೆ ನಂ. 242 ನನ್ನು ಖರೀದಿ ಮಾಡಿದಾಗಿನಿಂದ 3 ನೇ ಪ್ರತಿವಾದಿಯೇ ಸ್ವಾಧೀನ ಹೊಂದಿರುತ್ತಾನೆ ಅಂದರೆ ಸರಿಯಲ್ಲ. ಸರ್ವೆ ನಂ.242/2 ನ್ನು 1 ನೇ ಪ್ರತಿವಾದಿಯು 4 ನೇ ಪ್ರತಿವಾದಿಗೆ ದಿನಾಂಕ 13-6-2017 ರಂದು ಮಾರಾಟ ಮಾಡಿರುತ್ತಾನೆ ಅಂದರೆ ಸಾಕ್ಷಿ ನಮ್ಮ ಗಮನಕ್ಕೆ ಬಾರದ ರೀತಿಯಲ್ಲಿ ಮಾರಾಟ ಮಾಡಿರುತ್ತಾನೆ ಎನ್ನುತ್ತಾರೆ. ಸರ್ವೆ ನಂ. 242/2 ನ್ನು ಮಾರಾಟ ಮಾಡುವ ಕಾಲಕ್ಕೆ ಗೊಡಚಿನಮಲ್ಕಿಯಲ್ಲಿ 1 ನೇ ಪ್ರತಿವಾದಿ ಮಾತ್ರ ವಾಸವಿದ್ದ ಅಂದರೆ ಸರಿಯಲ್ಲ . ಸರ್ವೆ ನಂ.242/2 ನ್ನು 1 ನೇ ಪ್ರತಿವಾದಿ ತನ್ನ ಕಣ್ಣಿನ ಆಪರೇಷನ್ ಸಂಬಂಧ ಮಾರಾಟ ಮಾಡಿರುತ್ತಾನೆ ಅಂದರೆ ಗೊತ್ತಿಲ್ಲ. 4 ನೇ ಪ್ರತಿವಾದಿ ತಾನು ಖರೀದಿ ಮಾಡಿದ ಜಮೀನಿನ ಸ್ವಾಧೀನ

ಹೊಂದಿರುತ್ತಾನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ವಯಸ್ಸು ಈಗ 80 ಇರುತ್ತದೆ ಅಂದರೆ ಸರಿ. 1 ನೇ ಪ್ರತಿವಾದಿಗೆ ವಯಸ್ಸಾಗಿರುವ ಕಾರಣ ಆತ ತನ್ನಷ್ಟಕ್ಕೇ ತಾನೇ ದುಡಿದು ಜೀವನ ಮಾಡಲು ಆಗುವುದಿಲ್ಲ ಅಂದರೆ ಸರಿ. 1 ನೇ ಪ್ರತಿವಾದಿಯನ್ನು 3 ನೇ ಪ್ರತಿವಾದಿಯು ಜೋಪಾನ ಮಾಡುತ್ತಾನೆ ಅಂದರೆ ಸರಿಯಲ್ಲ. ನೀನು ಮಲ್ಲಾಪುರ ಪಿ ಜಿ ಯಲ್ಲಿ ವಾಸ ಇರುತ್ತೀಯಾ ಅಂದರೆ ಸಾಕ್ಷಿ ನಾನು ಗೊಡಚಿನಮಲ್ಕಿಗೆ ಬಂದು ಹೋಗುತ್ತೇನೆ ಎನ್ನುತ್ತಾರೆ. 1 ನೇ ವಾದಿಯನ್ನು 3 ನೇ ಪ್ರತಿವಾದಿ ಚೆನ್ನಾಗಿ ನೋಡಿಕೊಳ್ಳುವ ಕಾರಣ 242/1 ನ್ನು ಆತನಿಗೆ ದಿನಾಂಕ 7-3-2018 ರಂದು ನೋಂದಾಯಿತ ಮೃತ್ಯು ಪತ್ರ ಮಾಡಿರುತ್ತಾನೆ ಅಂದರೆ ನನಗೆ ಗೊತ್ತಿಲ್ಲ . ಮೃತ್ಯು ಪತ್ರಕ್ಕೆ ನಿಂಗಪ್ಪ ಸಿದ್ದಪ್ಪ ಮಗದುಮ್ಮ , ಯಲ್ಲಪ್ಪ ಸತ್ತೆಪ್ಪ ಒಬ್ಬಿ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ ಅಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ಪ್ರತಿವಾದಿ 1, 3 ಮತ್ತು 4 ರವರ ವಿರುದ್ದ ಪಾಲು ವಿಭಾಗ ಕೋರಿ ಓ ಎಸ್ ನಂ. 342/2015 ಹೂಡಿರುತ್ತಾಳೆ ಅಂದರೆ ಸರಿ. 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಯಾವತ್ತು ಮದುವೆಯಾಗಿಲ್ಲ ಮತ್ತು ಗಂಡ ಹೆಂಡತಿ ಎಂದು ಜೀವನ ಮಾಡಿಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವಿವಾಹಿತನಿರುತ್ತಾನೆ ಅಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 3 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಕೆ.ಹೆಚ್ ರವರು ಸಮಯ ಕೋರಿರುತ್ತಾರೆ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು ಗೋಕಾಕ.

ಸಾಕ್ಷಿಯ ಸಹಿ